# ಆಹಾ, ಹಾನ್ಲೆ!


ಹಾನ್ಲೆಯಿಂದ ದಕ್ಕುವ ಆಕಾಶದ ನೋಟ

**ಲಡಾಖ್ ಪ್ರಾಂತ್ಯದ ಪುಟ್ಟ ಹಳ್ಳಿ ಹಾನ್ಲೆ, ಇರುಳನ್ನು, ಕಡುಕತ್ತಲ ಆಕಾಶವನ್ನು ಪ್ರೀತಿಸುವವರಿಗೆಂದೇ ಇರುವ ಜಾಗ. ಗಾಢಗತ್ತಲಿನ ಆಕಾಶದಲ್ಲಿ ಮಿನುಗುವ ನಕ್ಷತ್ರಗಳನ್ನು, ಆಕಾಶಕಾಯಗಳನ್ನು ನೋಡುತ್ತಾ ಕತ್ತಲ ಲೋಕದ ದಿವ್ಯ ಅನುಭವ ಪಡೆಯಲು ಹವಣಿಸುವವರಿಗೆಂದೇ ಇರುವ ವಿಶೇಷ ತಾಣ.**

**■ ಚಂದ್ರಶೇಖರ್ ಜಿ.**

‘ಆಕಾಶ ನೋಡಲು ನೂಕುನುಗ್ಗಲೇಕೆ?’ ಎಂಬ ಗಾದೆ ಮಾತಿದೆ. ಬಹುಶಃ ಇದು ಶತಮಾನಗಳ ಹಿಂದಿನ ಗಾದೆ ಎಂಬುದು ನನ್ನ ಅನುಮಾನ. ನಕ್ಷತ್ರ ಲೋಕದ ಅದ್ಭುತ ನೋಟ ಆಗ ಎಲ್ಲರಿಗೂ, ಹೆಚ್ಚು ಕಡಿಮೆ ಎಲ್ಲಾ ಕಡೆಯೂ ಸಿಗುತ್ತಿತ್ತು. 50–60 ವರ್ಷಗಳ ಹಿಂದೆ ಕೂಡ ಇದು ತಕ್ಕಮಟ್ಟಿಗೆ ನಿಜವೇ ಆಗಿತ್ತು. ಆದರೆ ಈಗ ಕಾಲ ಬದಲಾಗಿದೆ. ಎಲ್ಲ ಕಡೆ ವಿದ್ಯುತ್ ದೀಪಗಳ ಬೆಳಕು, ಅದರ ಜೊತೆಗೆ ಹೊಗೆ, ದೂಳು ಸೇರಿ ನಕ್ಷತ್ರ ಲೋಕವನ್ನು ನಮ್ಮಿಂದ ಮರೆಮಾಚಿವೆ.

ಬರಿಗಣ್ಣಿಗೆ ಸುಮಾರು 3000 ನಕ್ಷತ್ರಗಳು ಕಾಣುತ್ತವೆಂದು ನೀವು ಕೇಳಿರಬಹುದು. ಬೆಂಗಳೂರಿನಂಥ ದೊಡ್ಡ ನಗರಗಳಲ್ಲಿ 30 ನಕ್ಷತ್ರಗಳು ಕಂಡರೆ ಅದೃಷ್ಟ. ಹಳ್ಳಿಗಳಲ್ಲಿ ಸ್ವಲ್ಪ ವಾಸಿ. ಆದರೆ ಅಲ್ಲೂ ದೀಪಗಳ ಹಾವಳಿಯಿಂದ ರಾತ್ರಿಯ ಆಕಾಶ ಬೆಳ್ಳಗಾಗುತ್ತಿದೆ. ಇನ್ನು ಕೆಲವೇ ವರ್ಷಗಳಲ್ಲಿ ಆಕಾಶ ವೀಕ್ಷಣೆ ಮಾಡಲು ಉಳಿಯುವ ಕೆಲವೇ ಜಾಗಗಳಲ್ಲಿ ನೂಕುನುಗ್ಗಲಾದರೂ ಆಶ್ಚರ್ಯವಿಲ್ಲ.

ಹಾಗೆ ನಿರಭ್ರ ಆಕಾಶವನ್ನು ನೋಡಲು ಇರುವ ಜಾಗವೊಂದು ಭಾರತದಲ್ಲಿಯೂ ಇದೆ. ಶುಭ್ರ ಆಕಾಶ. ನಿಂತ ನೆಲವೇ ಕಾಣದಂಥ ಕತ್ತಲೆ. ಕಣ್ಣೆತ್ತಿ ನೋಡಿದರೆ ಸಾಕು, ಥಕ್ಕನೆ ಕಾಣುವ ಆಕಾಶಗಂಗೆ. ಆಗಸದ ತುಂಬ ಮಿನುಗುವ ಸಾವಿರಾರು ನಕ್ಷತ್ರಗಳು. ಆ ಅಗಾಧ ಆಕಾಶದಲ್ಲಿ ಕಳೆದುಹೋಗುವ ಅಮೋಘ ಅನುಭವ. ಇಂಥ ಕ್ಷಣಗಳನ್ನು ಅನುಭವಿಸಬೇಕೆಂಬ ಆಸೆ ನಿಮ್ಮ ಮನಸ್ಸಿನಲ್ಲೂ ಹಾದು ಹೋಗಿದೆಯೇ? ಹೌದಾದರೆ, ಭಾರತದಲ್ಲಿ ನಿಮ್ಮ ಕನಸನ್ನು ನನಸಾಗಿಸುವ ಕೆಲವೇ ಜಾಗಗಳಲ್ಲಿ ಹಾನ್ಲೆ ಮುಂಚೂಣಿಯಲ್ಲಿದೆ.

ಭಾರತದ ಉತ್ತರದ ತುದಿಯಲ್ಲಿರುವ ಲಡಾಖ್ ಪ್ರವಾಸಿಗಳಿಗೆ ಮೆಚ್ಚಿನ ಸ್ಥಳ. ಮೋಟಾರ್ ಬೈಕ್ ಸವಾರಿ ಮಾಡುವ ಹವ್ಯಾಸಿಗಳಿಗಂತೂ ಅದು ಹೋಗಲೇಬೇಕಾದ ಸ್ಥಳವಾಗಿಬಿಟ್ಟಿದೆ. ಚಾರಣಿಗರೂ ಅತ್ತ ಕಾಲು ಹಾಕುತ್ತಿದ್ದಾರೆ. ಇದರ ಜೊತೆಗೆ ಆಕಾಶ ವೀಕ್ಷಣೆ ಮಾಡುವ ಹವ್ಯಾಸಿಗಳೂ ತಮ್ಮ ಟೆಲಿಸ್ಕೋಪ್, ಬೈನಾಕ್ಯುಲರ್ ಇತ್ಯಾದಿ ಪರಿಕರಗಳೊಂದಿಗೆ ಹಾನ್ಲೆಯತ್ತ ಮುಖ ಮಾಡುತ್ತಲಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ನಕ್ಷತ್ರ ಲೋಕದ ಬಗೆಗಿನ ಕುತೂಹಲ ಬಹಳ ದೊಡ್ಡ ಕೊಡುಗೆ ಕೊಟ್ಟಿದೆ. ಈಗಂತೂ ವಿಜ್ಞಾನಿಗಳು ಎಷ್ಟೊಂದು ಸಂಶೋಧನೆ ನಡೆಸಿದ್ದಾರೆ. ಹಬ್ಬಲ್, ವೆಬ್‌ನಂಥ ದೊಡ್ಡ ದೂರದರ್ಶಕಗಳ ಮೂಲಕ ಅದ್ಭುತ ಚಿತ್ರಗಳನ್ನು ತೆಗೆದಿದ್ದಾರೆ. ಅವನ್ನೆಲ್ಲ ಮೊಬೈಲ್‌ನಲ್ಲಿ, ಟೀವಿಯಲ್ಲಿ ನೋಡಬಹುದು, ಕೇಳಬಹುದು. ಹಾಗಾದರೆ ಹಣ, ಸಮಯ ಎಲ್ಲ ಖರ್ಚು ಮಾಡಿಕೊಂಡು ಆಕಾಶ ನೋಡಲು ದೂರದೂರಿಗೆ ಯಾಕೆ ಹೋಗಬೇಕು? ಅದರಿಂದೇನು ಲಾಭ ಎಂಬುದು ನಿಮ್ಮ ಪ್ರಶ್ನೆಯೇ? ಹಾಗಾದರೆ ಸಮುದ್ರತೀರ, ನದಿ, ಜಲಪಾತ, ಕಾಡು, ಪ್ರಾಣಿ ಸಂಗ್ರಹಾಲಯ ಇತ್ಯಾದಿಗಳನ್ನು ನೋಡಲು ಜನ ಸಾವಿರ ಸಾವಿರ ಸಂಖ್ಯೆಯಲ್ಲಿ ಯಾಕೆ ಹೋಗುತ್ತಾರೆ? ಮನೆಯಲ್ಲೇ ಕೂತು ನೋಡಬಹುದಲ್ಲ?

ಒಂದು ನದಿ ದಡಕ್ಕೆ ಹೋದರೆ ನೋಡುವುದು ಬರೀ ನದಿಯನ್ನಲ್ಲ. ಅದರೊಂದಿಗಿನ ತಂಗಾಳಿ, ಅಲ್ಲಿನ ಪಕ್ಷಿಗಳ ಕಲರವ, ಜುಳು ಜುಳು ನಿನಾದ ಎಲ್ಲ ಸೇರಿ ಒಂದು ಅದ್ಭುತ ಲೋಕವೇ ನಿರ್ಮಾಣವಾಗುತ್ತದೆ. ಸಮುದ್ರದ ಅಗಾಧತೆಯನ್ನು ಕಣ್ಣಾರೆ ನೋಡಿಯೇ ತಿಳಿಯಬೇಕು. ನಕ್ಷತ್ರ ಲೋಕವೂ ಹಾಗೆಯೇ. ಸಾವಿರಾರು ವರ್ಷಗಳ ಹಿಂದೆ ನಮ್ಮ ಹಿರಿಯರು ತಲೆಯೆತ್ತಿ ನೋಡಿದಾಗ ಯಾವ ಅನುಭವ ಅವರಿಗಾಗಿತ್ತೋ ಅದನ್ನು ಪ್ರತ್ಯಕ್ಷವಾಗಿ ಅನುಭವಿಸುವ, ರೋಮಾಂಚನಗೊಳ್ಳುವ, ಒಂದು ಕ್ಷಣ ಮೈಮರೆತು ನಕ್ಷತ್ರ ಲೋಕದಲ್ಲಿ, ಅಗಾಧ ವಿಶ್ವದ ವಿಸ್ಮಯಗಳಲ್ಲಿ ಕಳೆದೇ ಹೋಗುವುದನ್ನು ಪದಗಳಲ್ಲಿ ವಿವರಿಸುವುದು ಅಸಾಧ್ಯ.

ಬೆಂಗಳೂರಿನ ಭಾರತೀಯ ಬಾಹ್ಯಾಕಾಶ ಸಂಸ್ಥೆ (IIA) ಲಡಾಖ್ ಪ್ರಾಂತ್ಯದ ಹಾನ್ಲೆ ಎಂಬ ಪುಟ್ಟ ಹಳ್ಳಿಯಲ್ಲಿ 2 ಮೀಟರ್ ವ್ಯಾಸದ ದೂರದರ್ಶಕವನ್ನು ಸ್ಥಾಪಿಸಿ ಸುಮಾರು 2 ದಶಕಗಳಿಂದ ವೈಜ್ಞಾನಿಕ ಅಧ್ಯಯನ ನಡೆಸುತ್ತಿದೆ. ಆದರೆ ಅಲ್ಲೇ ಯಾಕೆ? ಬೆಂಗಳೂರಿನಿಂದ 3000 ಕಿ.ಮೀ. ದೂರ. ಸಮುದ್ರ ಮಟ್ಟದಿಂದ 14,000 ಅಡಿ ಎತ್ತರದ ಜಾಗ. ಚಳಿಗಾಲದಲ್ಲಿ –20 ಡಿಗ್ರಿಗಿಂತಲೂ ಕಡಿಮೆ ಉಷ್ಣತೆಯ ಮೈ